Received on 3/9/2020
WUP

**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: ಶ್ರೀ ಮಹೇಶ್ವರ.ಎಸ್. ಗೆಜೆಟೆಡ್ ಮ್ಯಾನೇಜರ್ ಇವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ದಿನಾಂಕ : 27.02.2019 ಹಾಗೂ ದಿನಾಂಕ : 15.05.2019ರ ಸಂಖ್ಯೆ : ಸಿಆಸುಇ/186/ಎಸ್ಆರ್ಎಸ್/2018ರ ಆದೇಶಗಳು.

2. ಈ ಕಛೇರಿ ದಿನಾಂಕ : 25.07.2019ರ ಸಂಖ್ಯೆ : ಕಾಶಿಇ/26/ ಮ್ಯಾ/ಜೇಪ/ಬಸ್ಥಾವಿ/2019-20 ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ರಾಜ್ಯವ್ಯಾಪಿ ಉಳಿಕೆ ಮೂಲವೃಂದದ ಗೆಜೆಟೆಡ್ ಮ್ಯಾನೇಜರ್‌ಗಳ ಅಂತಿಮ ಜ್ಯೇಷ್ಠತಾ ಪಟ್ಟಿ.

3. ದಿನಾಂಕ: 09.06.2020 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು.

*****

**ಪ್ರಸ್ತಾವನೆ:**

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ **ಸಹಾಯಕ ನಿರ್ದೇಶಕರ** ಹುದ್ದೆಗಳನ್ನು **ಗೆಜೆಟೆಡ್ ಮ್ಯಾನೇಜರ್** ಹುದ್ದೆಯಿಂದ ಶೇಕಡ 100ರಷ್ಟು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2) ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ಈ ಇಲಾಖೆಯ ರಾಜ್ಯವ್ಯಾಪಿ ಉಳಿಕೆ ಮೂಲವೃಂದದ **ಗೆಜೆಟೆಡ್ ಮ್ಯಾನೇಜರ್**‌ಗಳ ಅಂತಿಮ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ **ಸಹಾಯಕ ನಿರ್ದೇಶಕ** ವೃಂದದ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ಉಲ್ಲೇಖ (3)ರಲ್ಲಿ ದಿನಾಂಕ:09.06.2020ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿ ಇರುವ **ಸಹಾಯಕ ನಿರ್ದೇಶಕರ** ಹುದ್ದೆಗಳನ್ನು ಅರ್ಹ **ಗೆಜೆಟೆಡ್ ಮ್ಯಾನೇಜರ್**‌ಗಳಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಅದರಂತೆ, ಶ್ರೀ ಮಹೇಶ್ವರ.ಎಸ್. ಗೆಜೆಟೆಡ್ ಮ್ಯಾನೇಜರ್ ಇವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಕಾಶಿಇ/46/ಸ.ನಿ/ಬಡ್ತಿ/ಬಸ್ಥಾವಿ/2019-20, ಬೆಂಗಳೂರು ದಿನಾಂಕ: 01.09.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಶ್ರೀ ಮಹೇಶ್ವರ.ಎಸ್. ಗೆಜೆಟೆಡ್ ಮ್ಯಾನೇಜರ್ ಇವರಿಗೆ ವೇತನ ಶ್ರೇಣಿ **ರೂ. 43100-1100-46400-1250-53900-1450-62600-1650-72500-1900-83900ರಲ್ಲಿ** ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ **ಸಹಾಯಕ ನಿರ್ದೇಶಕರ** ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಅವರ ಹೆಸರಿನ ಮುಂದೆ ಕಾಲಂ (4)ರಲ್ಲಿ ನಮೂದಾಗಿರುವ ಕಛೇರಿಯಲ್ಲಿ ಇರುವ ಖಾಲಿ ಹುದ್ದೆಗೆ ಎದುರಾಗಿ, ಈ ಕೂಡಲೇ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

**ರಾಜ್ಯವ್ಯಾಪಿ ಉಳಿಕೆ ಮೂಲವೃಂದ (ಆರ್.ಕೆ.)**

| ಕ್ರ. ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | 2 | 3 | 4 | 5 |
| 1 | ಮಹೇಶ್ವರ.ಎಸ್. | ಕೇಂದ್ರ ಕಛೇರಿ, ಬೆಂಗಳೂರು | ಪ್ರಾದೇಶಿಕ ಕಛೇರಿ, ಶಿವಮೊಗ್ಗ. | ಶ್ರೀಮತಿ ಉಮಾ.ಕೆ.ವಿ. ಇವರ ವಯೋನಿವೃತ್ತಿಯಿಂದ ತೆರವಾದ ಹುದ್ದೆಗೆ ಎದುರಾಗಿ |

DCE-46-AD-Promotion-2019-20

ಬಡ್ತಿ ಹೊಂದಿರುವ ಸಹಾಯಕ ನಿರ್ದೇಶಕರು ಆದೇಶದ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಿಂದ ಪಡೆದು ಸ್ಥಳನಿಯುಕ್ತಿಗೊಳಿಸಲಾದ ಕಛೇರಿಯಲ್ಲಿ ಈ ಆದೇಶ ಹೊರಡಿಸಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯನ್ನು ರದ್ದುಪಡಿಸಲಾಗುವುದು. ಬಡ್ತಿ ಹೊಂದಿದ ಅಧಿಕಾರಿಯು ನಿಯಮಾನುಸಾರ ಸೇರುವಿಕೆ ಕಾಲ ಪಡೆಯಲು ಅರ್ಹರಿರುತ್ತಾರೆ.

(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ಮುಖ್ಯಆಡಳಿತಾಧಿಕಾರಿಗಳು

ಇವರಿಗೆ:

1) ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು -ಮಾಹಿತಿಗಾಗಿ.
2) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಶಿವಮೊಗ್ಗ – ಅಗತ್ಯಕ್ರಮಕ್ಕಾಗಿ.
3) ಶ್ರೀ ಮಹೇಶ್ವರ.ಎಸ್, ಗೆಜೆಟೆಡ್ ಮ್ಯಾನೇಜರ್, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4) ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಆದೇಶವನ್ನು ಇಲಾಖಾ ವೆಬ್–ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ.
2. ಕಛೇರಿ ಪ್ರತಿ.